# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 01/16-17

ದಿನಾಂಕ : 26-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ

ಪುತ್ತೂರು

ASSISTANT COMMISSIONER REVENUE SUB-DIVISION PUTTUR D.K. ಅಸಿಸ್ಟೆಂಟ್ ಕಮೀಶನರ್ ರೆವಿನ್ಯೂ ಸಬ್ ಡಿವಿಜನ್ ಪುತ್ತೂರು ದ.ಕ.

ಮೇಲ್ಮನವಿದಾರರು

ಶ್ರೀ ಚೆನ್ನಪ್ಪ ಗೌಡ
ಬಿನ್ ದಿ| ಅಣ್ಣು ಗೌಡ,
ಪೂಂಜಾಳ ಮನೆ,
ಕರಾಯ ಗ್ರಾಮ,
ಬೆಳ್ತಂಗಡಿ ತಾಲೂಕು ದ.ಕ.
(ನ್ಯಾಯವಾದಿ ಶ್ರೀ ಮನೋಹರ ಕುಮಾರ್ ಎ)

- ಮತ್ತು -

ಪ್ರತಿವಾದಿಯವರು

ತಹಶೀಲ್ದಾರರು
ಬೆಳ್ತಂಗಡಿ ತಾಲೂಕು ದ.ಕ.

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಬೆಳ್ತಂಗಡಿ ತಾಲೂಕು ಕರಾಯ ಗ್ರಾಮದ INH: 3/1993-94 ರಂತೆ ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಕರಾಯ ಗ್ರಾಮದ ಸ.ನಂ. 43/2P3 ರ ಪೈಕಿ ವಿಸ್ತೀರ್ಣ 0.55 ಎಕ್ರೆ ಮತ್ತು 43/2P2 ವಿಸ್ತೀರ್ಣ 0.85 ಎಕ್ರೆ ಜಮೀನುಗಳು ದಿ| ಅಣ್ಣು ಗೌಡರಿಗೆ LRY: 55/74-75 ರಂತೆ ಬಂದಿದ್ದು, ಅವರ ಹೆಸರಲ್ಲಿ ಖಾತೆ ದಾಖಲಾಗಿತ್ತು. ನಂತರ ಅಣ್ಣು ಗೌಡರು ಮೃತಪಟ್ಟು ಅವರ ವಾರೀಸುದಾರರ ಹೆಸರಲ್ಲಿ ಖಾತೆ ಬದಲಾವಣೆಗೆ INH: 3/93-94 ರಂತೆ ಆದೇಶವಾಗಿರುತ್ತದೆ. ಸದ್ರಿ ಆದೇಶದಂತೆ ಮೃತರ ವಾರೀಸುದಾರರಾದ ಚೆನ್ನಪ್ಪ ಗೌಡರ ಮತ್ತು ಚಿದಾನಂದ ಗೌಡರ ಹೆಸರಲ್ಲಿ ಖಾತೆ ದಾಖಲಾಗಿರುತ್ತದೆ. ಆದರೆ ಖಾತೆ ಬದಲಾವಣೆ ಸಮಯ ಚೆನ್ನಪ್ಪ ಗೌಡ (ಅಪೀಲುದಾರ) ರ ಹೆಸರು ಚಂದಪ್ಪ ಗೌಡ ಎಂದು ಪಹಣಿ ದಾಖಲಾಗಿರುವುದರಿಂದ ಅದನ್ನು ಸರಿಪಡಿಸುವಂತೆ ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ವಿಳಂಬ ವಿನಾಯ್ತಿಗಾಗಿ ಕಾಲ ಪರಿಮಿತಿ ಕಾಯ್ದೆ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 14-06-2016 ರಂದು ಹಾಜರಾಗುವಂತೆ ನೋಟೀಸು ನೀಡಿ ವಿಚಾರಣೆಗೆ ಈ ದಿನವೇ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿದಾರರ ಹೆಸರನ್ನು ಚಂದಪ್ಪ ಗೌಡರ ಬದಲು ಚೆನ್ನಪ್ಪ ಗೌಡ ಎಂದು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಹಾಗೂ ಸಲ್ಲಿಸಲಾದ ಗುರುತು ಚೀಟಿ, ಪಡಿತರ ಚೀಟಿಗಳ ಜೆರಾಕ್ಸ್ ಪ್ರತಿಗಳಲ್ಲಿ ಮೇಲ್ಮನವಿದಾರರ ಹೆಸರು ಚೆನ್ನಪ್ಪ ಗೌಡ ಎಂದಿರುತ್ತದೆ. ಇವರ ತಂದೆಯ ಹೆಸರು, ವಿಳಾಸ ಇತ್ಯಾದಿ ತಾಳೆ ಇರುವುದನ್ನು ಪರಿಶೀಲಿಸಿಕೊಂಡು ಹೆಸರನ್ನು ಚೆನ್ನಪ್ಪ ಗೌಡ ಎಂಬುದಾಗಿ ಬದಲಾಯಿಸಬಹುದೆಂದು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

<u>ಆದೇಶ.</u>

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಕರಾಯ ಗ್ರಾಮದ ಸ.ನಂ. 43/2P3 ವಿಸ್ತೀರ್ಣ 0.55 ಎಕ್ರೆ ಮತ್ತು 43/2P2 ವಿಸ್ತೀರ್ಣ 0.85 ಎಕ್ರೆ ಪಹಣಿಗಳಲ್ಲಿರುವ ಚಂದಪ್ಪ ಗೌಡ ಎಂಬ ಹೆಸರನ್ನು ಚೆನ್ನಪ್ಪ ಗೌಡ ಎಂಬುದಾಗಿ ಸರಿಪಡಿಸಲು ದಾಖಲಾತಿ ಪರಿಶೀಲನೆಯಿಂದ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಮನೋಹರ ಕುಮಾರ್ ಎ ಇವರ ಮುಖಾಂತರ ಜ್ಯಾರಿ.
ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.